**ಭಾರೀ ಅಂತರವಿದೆ. ಇದಕ್ಕೆ ಕಾರಣವೇನು? ನೀವು ಮೊದಲ ಕಾದಂಬರಿ ಬರೆದ ಸಂದರ್ಭ ಹೇಗಿತ್ತು?**

ಕಥೆಗಾರನೊಬ್ಬ ಕಾದಂಬರಿ ಬರೆಯುವುದಕ್ಕೆ ಒಂದಿಷ್ಟು ಅನುಭವ ಇರಬೇಕು. ಸಹಜವಾಗಿಯೇ ನನ್ನಲ್ಲಿ ಆಗ ಅನುಭವದ ಕೊರತೆಯಿತ್ತು. ಹಾಗಾಗಿ ಅಷ್ಟೊಂದು ವಿಳಂಬವಾಯಿತು. ಇನ್ನೂ ಒಂದು ಕಾರಣವಿದೆ. ಅದೇನೆಂದರೆ, ಕಾದಂಬರಿ ಬರೆಯುವಂತೆ ಯಾರೂ ನನ್ನನ್ನು ಒತ್ತಾಯಿಸಿರಲಿಲ್ಲ. ಆ ಸಂದರ್ಭದಲ್ಲಿ ಬಂಗಾಳಿ ಸಾಹಿತ್ಯ ಲೋಕದಲ್ಲಿ ಅನೇಕ 'ಅತಿರಥ-ಮಹಾರಥ'ರಿದ್ದರು. ವಿಮಲ್‌ಕರ್, ಸಂತೋಷಕುಮಾರ್ ಘೋಷ್, ವಿಮಲ್ ಮಿತ್ರ, ನರೇಂದ್ರನಾಥ ಮಿತ್ರ, ನಾರಾಯಣ ಗಂಗೋಪಾಧ್ಯಾಯ, ತಾರಾಶಂಕರ ಬಂದ್ಯೋಪಾಧ್ಯಾಯ... ಒಬ್ಬರೇ ಇಬ್ಬರೇ! ಇವರೆಲ್ಲರ ಮುಂದೆ ನಾನು ಯಾರು! ಒಬ್ಬ ಸಾಮಾನ್ಯ. ನನಗೆ ಬರೆಯುವುದಕ್ಕೆ 'ಸ್ಥಳ'ವೇ ಇರಲಿಲ್ಲ. ಅದೊಂದು ದಿನ, ನಾನು ಕೆಲಸ ಮಾಡುತ್ತಿದ್ದ ಪತ್ರಿಕೆ (ಆನಂದಬಾಝಾರ್ ಪತ್ರಿಕಾ) ಸಂಪಾದಕರಾದ ಸಾಗರಮಯ ಘೋಷ್ ಅವರು ನನ್ನನ್ನು ಕರೆದು ಹೇಳಿದರು, 'ಶೀರ್ಷೇಂದು, ನೀನು ಮತ್ತು ಸುನೀಲ್ (ನನ್ನ ಸಹೋದ್ಯೋಗಿ) ಇಬ್ಬರಲ್ಲಿ ಒಬ್ಬರು ಒಂದು ಕಾದಂಬರಿಯನ್ನು ಬರೆಯಬೇಕು.' ನಾನು ಅದೇ ದಿನ ನನ್ನ ಸ್ನೇಹಿತನಾದ ಬರೇನ್ ಜೊತೆಯಲ್ಲಿ ಈ ಬಗ್ಗೆ ಚರ್ಚಿಸಿದೆ. 'ನನ್ನಿಂದ ಇದು ಸಾಧ್ಯವಾಗದು; ನೀನೇ ಬರೆದುಬಿಡು' ಎಂದು ಆತನನ್ನು ಒತ್ತಾಯಿಸಿದೆ. 'ನನ್ನಿಂದ ಈಗ ಇದು ಸಾಧ್ಯವಾಗದು. ಮನೆಯಲ್ಲಿ ಗೆದ್ದಲು ತುಂಬಿಕೊಂಡಿವೆ. ಹಸ್ತಪ್ರತಿಯನ್ನು ಕಾಪಾಡಿಕೊಳ್ಳುವುದೂ ಕಷ್ಟ...' ಎನ್ನುವ ಉತ್ತರ ಬಂದಿತು ಆತನಿಂದ. ನಂತರ ಇದೇ ವಿಷಯದ ಕುರಿತಾಗಿ ತುಂಬಾ ಹೊತ್ತು ಚರ್ಚಿಸಿದೆವು. ನಂತರ ನಾನು ಮನೆಗೆ ಬಂದು ಯೋಚಿಸಿದೆ. ಅದೇ ಗೆದ್ದಲಿನ ವಿಷಯವನ್ನೇ ಇಟ್ಟುಕೊಂಡು 'ಘುಣಪೋಕಾ' ಕಾದಂಬರಿ ರಚಿಸಿದೆ. ಅದು ಸಂಪಾದಕರಿಗೆ ಇಷ್ಟವಾಯಿತು; ಮಾತ್ರವಲ್ಲ, ಜನಮೆಚ್ಚುಗೆಯನ್ನೂ ಪಡೆಯಿತು.

ಇದೊಂದು ವಾಸ್ತವಿಕ ಸಮಸ್ಯೆಯಾಧಾರಿತ ಕಾದಂಬರಿ. ದೇಶ ವಿಭಜನೆಯ ವಸ್ತುವನ್ನು ಆಧರಿಸಿದೆ. ದೇಶ ಇಬ್ಭಾಗವಾದಾಗ ಪ್ರಜೆಗಳಿಗೆ ಉಂಟಾಗುವ ಕಷ್ಟ ಏನು ಎನ್ನುವುದನ್ನು ನಾನು ನನ್ನ ಜೀವನದಲ್ಲಿಯೇ ಅನುಭವಿಸಿದ್ದೇನೆ. ಭಾರತದ ವಿಭಜನೆಯ ಜೊತೆಜೊತೆಯಲ್ಲಿಯೇ ನಮ್ಮ ಬಹುದೊಡ್ಡ ಕುಟುಂಬವೂ ಛಿದ್ರ ವಿಚ್ಛಿದ್ರವಾಯಿತು. ಕೆಲವೇ ವರ್ಷಗಳಲ್ಲಿ ನಮ್ಮ ಮೂಲ ಕುಟುಂಬದ ಸದಸ್ಯರೇ ನನಗೆ ಅಪರಿಚಿತರಾದರು. ಸ್ವಂತ ಸಹೋದರರ ಮಕ್ಕಳಿಗೂ ನಾನು ಅಪರಿಚಿತನಾಗಿಹೋದೆ! ಅದೊಂದು ದೊಡ್ಡ ದುರಂತ ಕಥೆ! ನಾನು ಜನಿಸಿದ್ದು ಪೂರ್ವ ಬಂಗಾಳದಲ್ಲಿ; ದೊಡ್ಡವನಾಗಿದ್ದು ಉತ್ತರ ಬಂಗಾಳ(ಶಿಲಿಗುಡಿಯಲ್ಲಿ ತುಂಬಾ ಕಾಲ ಇದ್ದೆ)ದಲ್ಲಿ; ಈಗ ದಕ್ಷಿಣ ಬಂಗಾಳದಲ್ಲಿ ವಾಸಿಸುತ್ತಿದ್ದೇನೆ!

◆ **ಕಳೆದ 65 ವರ್ಷಗಳ ಸುದೀರ್ಘ ಸಾಹಿತ್ಯಯಾನದಲ್ಲಿ ನಿಮ್ಮ ಉದ್ದೇಶ, ಪ್ರೇರಣೆ, ಸ್ಫೂರ್ತಿ ಇತ್ಯಾದಿ ಯಾವ ರೀತಿಯ ಬದಲಾವಣೆ ಕಂಡಿವೆ?**

ನಾನು ಯಾರನ್ನೂ ಅನುಕರಣೆ ಮಾಡುವುದಿಲ್ಲ; ನನ್ನದೇ ಮಾರ್ಗದಲ್ಲಿ ಸಾಗುತ್ತಿದ್ದೇನೆ. ನನ್ನತನವನ್ನು ಗಟ್ಟಿಗೊಳಿಸಿಕೊಳ್ಳುವುದಕ್ಕಾಗಿ ನಾನು ಗರಿಷ್ಠ ಪ್ರಯತ್ನಗಳನ್ನು ನಡೆಸುತ್ತಲೇ ಬಂದಿದ್ದೇನೆ. ಬರವಣಿಗೆಯ ಮೊದಲ ಹಂತದಲ್ಲಿ ನಾನು ನನ್ನ ಬರಹಗಳ ಸಾಲುಗಳನ್ನು ಪರಿಷ್ಕರಣೆ ಮಾಡುವುದಕ್ಕೆ, ಭಾಷಾಜ್ಞಾನವನ್ನು ಸುಧಾರಿಸಿಕೊಳ್ಳುವುದಕ್ಕೆ ಶಕ್ತಿಮೀರಿ ಪ್ರಯತ್ನಿಸಿದ್ದೇನೆ. ಓದುಗರ ಮೇಲೆ ಪರಿಣಾಮ ಬೀರುವಂತಹ ಹೊಸ ಪದಗಳಿಗಾಗಿ ನಿರಂತರ ಹುಡುಕಾಟ ನಡೆಸಿದ್ದೇನೆ. ನನ್ನದೇ ಪ್ರತ್ಯೇಕ ಶೈಲಿಯನ್ನು ರೂಪಿಸಿಕೊಳ್ಳುವುದಕ್ಕಾಗಿ ನನ್ನ 20-30ರ ವಯಸ್ಸಿನಲ್ಲಿ ತುಂಬಾ ಪರಿಶ್ರಮಪಟ್ಟಿದ್ದೇನೆ. ವಾಲ್ಮೀಕಿಯಿಂದ ಹಿಡಿದು ಶೇಕ್ಸ್‌ಪಿಯರ್‌ವರೆಗೆ ಎಲ್ಲರೂ ತಮ್ಮದೇ ವಿಭಿನ್ನ ಶೈಲಿಯನ್ನು ಹೊಂದಿದ್ದರಿಂದಲೇ ಬಹುಕಾಲ ಜನರ ಮನಸ್ಸಿನಲ್ಲಿ ಉಳಿದುಕೊಂಡಿದ್ದಾರೆ ಎನ್ನುವುದು ನನ್ನ ಭಾವನೆ. ನಾನು ಬರೆದಿರುವುದೂ ಕೂಡ ಅದೇ ಬದುಕು, ಪ್ರೀತಿ, ಪ್ರೇಮ, ದೌರ್ಜನ್ಯ, ಹಿಂಸೆ... ಇತ್ಯಾದಿಗಳನ್ನು ಕುರಿತಾಗಿಯೇ! ನನ್ನ ಪ್ರಕಾರ ಎಲ್ಲಾ ರೀತಿಯ ಕಥೆಗಳನ್ನೂ ಈಗಾಗಲೇ ಹೇಳಿ ಆಗಿದೆ. ಈಗ ಯಾರೂ ಸಹ ಹೊಸ ಕಥೆಯನ್ನು ಹೇಳುವುದು ಸಾಧ್ಯವೇ ಇಲ್ಲ. ಏನಿದ್ದರೂ ಹಳೆಯ ಕಥೆಯನ್ನೇ ಹೊಸ ಅರ್ಥದೊಂದಿಗೆ, ಬದಲಾದ ಒಳನೋಟದೊಂದಿಗೆ, ನೂತನ ಎಳೆಯ ಜೋಡಣೆಯೊಂದಿಗೆ ಹೇಳಬಹುದು ಅಷ್ಟೇ. ತುಂಬಾ ವರ್ಷಗಳಿಂದ ಬರವಣಿಗೆಯಲ್ಲಿ ತೊಡಗಿಕೊಂಡಿರುವ